# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮೈಸೂರು ಜಿಲ್ಲೆ, ಸರಗೂರು ತಾಲ್ಲೂಕು, ಕಂದಲಿಕೆ ಹೋಬಳಿ, ಬಿದರಹಳ್ಳಿ ಗ್ರಾಮದ ಸ.ನಂ.20 ರಲ್ಲಿ 2-16 ಎಕರೆ ಜಮೀನನ್ನು ನಿರಾಶ್ರಿತರ ಕುಟುಂಬಗಳಿಗೆ ಶಾಶ್ವತ ಆಶ್ರಯ ಯೋಜನೆಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ.

*****

**ಓದಲಾಗಿದೆ:**

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಾನೀನಿನಿ/ಆ/ಸಿ.4/ಸಿಆರ್.159/2021-22/2989, ದಿನಾಂಕ:19-08-2021.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಇವರು ಮೈಸೂರು ಜಿಲ್ಲೆ, ಸರಗೂರು ತಾಲ್ಲೂಕು, ಕಂದಲಿಕೆ ಹೋಬಳಿ, ಬಿದರಹಳ್ಳಿ ಗ್ರಾಮದ ಸ.ನಂ.20 ರಲ್ಲಿ ಒಟ್ಟು 7-03 ಎಕರೆ ಜಮೀನಿನ ಪೈಕಿ 2-16 ಎಕರೆ ಜಮೀನು ವೆಂಕಟಮ್ಮ ಬಿನ್ ಸುಬ್ಬಶೆಟ್ಟಿರವರ ಹೆಸರಿನಲ್ಲಿ ಕಬಿನಿ ಮುಳುಗಡೆಗೆ ಭೂಸ್ವಾಧೀನವಾಗಿದ್ದು, ಉಳಿಕೆ 4-13 ಎಕರೆ ಜಮೀನು ಕಾವೇರಿ ನೀರಾವರಿ ನಿಗಮದ ಹೆಸರಿನಲ್ಲಿ ಖಾತೆಯಾಗಿದ್ದು, ಅದರ ಪೈಕಿ 2-16 ಎಕರೆ ಜಮೀನು ನದಿಯ ದಂಡೆಯಿಂದ ಮೇಲ್ಭಾಗದಲ್ಲಿದ್ದು, ಸಮತಟ್ಟಾದ ಪ್ರದೇಶವಾಗಿರುವುದರಿಂದ ನೆರೆ ಸಂತ್ರಸ್ಥರಿಗೆ ವಸತಿ ಉದ್ದೇಶಕ್ಕೆ ಸದರಿ ಜಮೀನನ್ನು ಹಸ್ತಾಂತರಿಸುವಂತೆ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರುರವರು ದಿನಾಂಕ:04-11-2019 ರಲ್ಲಿ ಕೋರಿರುತ್ತಾರೆ ಎಂದು ವರದಿ ಮಾಡಿರುತ್ತಾರೆ.

2. ಮೈಸೂರು ಜಿಲ್ಲೆ, ಸರಗೂರು ತಾಲ್ಲೂಕು, ಕಂದಲಿಕೆ ಹೋಬಳಿ, ಬಿದರಹಳ್ಳಿ ಗ್ರಾಮದ ಸರ್ವೆ ನಂ.20 ರಲ್ಲಿ ಒಟ್ಟು 7-03 ಎಕರೆ ಜಾಗದ ಪೈಕಿ 4-13 ಎಕರೆ ಪೈಕಿ 2-16 ಎಕರೆ ಜಮೀನನ್ನು ಉಪ-ನೋಂದಣಾಧಿಕಾರಿಗಳು ನೀಡಿರುವ ಪ್ರಸ್ತುತ ಮಾರುಕಟ್ಟೆ ಮೌಲ್ಯದ ದರಪಟ್ಟಿಯಂತೆ ಸದರಿ ಜಮೀನಿನ ಮೌಲ್ಯ ರೂ.7,20,000/- ಗಳನ್ನು ಪಾವತಿಸಿಕೊಂಡು ನಿರಾಶ್ರಿತರ ಕುಟುಂಬಗಳಿಗೆ ಶಾಶ್ವತ ಆಶ್ರಯ ಯೋಜನೆಯ ಉದ್ದೇಶಕ್ಕಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಹಸ್ತಾಂತರಿಸಬಹುದಾಗಿರುತ್ತದೆ ಎಂದು ಹಾಗೂ ಪ್ರಸ್ತಾವನೆಗೆ ಸಂಬಂಧಿಸಿದ ಆರ್.ಟಿ.ಸಿ., ಸ್ಕೆಚ್, ಲೆಕ್ಕಾಚಾರದ ತಃಖ್ತೆ, ಚೆಕ್‌ಲಿಸ್ಟ್, ಸಮ್ಮತಿ ಪತ್ರ, ಉಪ ನೋಂದಣಾಧಿಕಾರಿಗಳ ಮಾರ್ಗಸೂಚಿ ಬೆಲೆ ಮತ್ತು ಮೌಲ್ಯ ಮಾಪನ ವಿವರಗಳೊಂದಿಗೆ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

3. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಲಾಗಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ:ಜಸಂಇ 83 ಎಂಎಂಕೆ 2020,**
**ಬೆಂಗಳೂರು, ದಿನಾಂಕ: 30-12-2021**

ಮೈಸೂರು ಜಿಲ್ಲೆ, ಸರಗೂರು ತಾಲ್ಲೂಕು, ಕಂದಲಿಕೆ ಹೋಬಳಿ, ಬಿದರಹಳ್ಳಿ ಗ್ರಾಮದ ಸರ್ವೆ ನಂ.20 ರಲ್ಲಿ ಒಟ್ಟು 7-03 ಎಕರೆ ಜಮೀನಿನ ಪೈಕಿ ಕಾವೇರಿ ನೀರಾವರಿ ನಿಗಮದ ಹೆಸರಿನಲ್ಲಿ ಖಾತೆಯಾಗಿರುವ ಉಳಿಕೆ ಜಮೀನು 4-13 ಎಕರೆ ಪೈಕಿ 2-16 ಎಕರೆ ಜಮೀನನ್ನು ಉಪ-ನೋಂದಣಾಧಿಕಾರಿಗಳ ಮಾರ್ಗಸೂಚಿಯಂತೆ ರೂ.7,20,000/- (ರೂಪಾಯಿ ಏಳು ಲಕ್ಷ ಇಪ್ಪತ್ತು ಸಾವಿರ ಮಾತ್ರ) ಗಳನ್ನು ಪಾವತಿಸುವ ಹಾಗೂ ಕಾವೇರಿ ನೀರಾವರಿ ನಿಗಮವು ವಿಧಿಸುವ ಷರತ್ತಿಗೊಳಪಟ್ಟು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಹಸ್ತಾಂತರಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

...2

2. ಈ ಆದೇಶವನ್ನು ಕಂದಾಯ ಇಲಾಖೆಯ ಆದೇಶ ಸಂಖ್ಯೆ:ಆರ್.ಡಿ 32 ಎಲ್.ಜಿ.ಪಿ 2019, ದಿನಾಂಕ:01-02-2021 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

30/12/2021

**(ಮನೋಹರ ವೈ. ರೊಟ್ಟಿ)**
**ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-2)**
**ಜಲಸಂಪನ್ಮೂಲ ಇಲಾಖೆ.**

ಪ್ರತಿಯನ್ನು:-

1) ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕ ಪರಿಶೋಧನ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬೆಂಗಳೂರು.
4) ಸರ್ಕಾರದ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
5) ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು/ ಮೈಸೂರು.
6) ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.
7) ಮುಖ್ಯ ಇಂಜಿನಿಯರ್, ನೀರಾವರಿ (ದಕ್ಷಿಣ) ವಲಯ, ಮೈಸೂರು.
8) ~~ಶಾಖಾ~~ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

+++++